ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಜನರಿಗೆ ಹೊಸದಾಗಿ ಕಲ್ಲುಗಣಿಗಾರಿಕೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ, ಯಾವ ಮೌಲ್ಯಮಾಪನ ಆಧಾರದ ಮೇಲೆ ಯಾರು ಯಾರಿಗೆ ಪರವಾನಗಿ ನೀಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು).

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಕೊಡಗು ಜಿಲ್ಲೆಯಲ್ಲಿ ಹೊಸದಾಗಿ ಈ ಕೆಳಕಂಡ 3 ಜನರಿಗೆ ಕಲ್ಲು ಗಣಿಗಾರಿಕೆ ಪ್ರಾರಂಭಿಸಲು ಅನುಮತಿ ನೀಡಲಾಗಿದೆ. ಕಲ್ಲು ಗಣಿಗಾರಿಕೆ ಪ್ರಾರಂಭಿಸಲು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು 1994ರ ನಿಯಮ 23 ಹಾಗೂ ಇದರಡಿಯ ಉಪ ನಿಯಮಗಳು (1) (2) (3) (4) ರಂತೆ ಮಂಜೂರಾತಿ ನೀಡಲಾಗಿದೆ.

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ವಿಳಾಸ	ಸರ್ವೆ ಸಂಖ್ಯೆ	ಗ್ರಾಮ	ವಿಸ್ತೀರ್ಣ	ಮಂಜೂರಾದ ದಿನಾಂಕ
1.	ಶ್ರೀ ಹೆಚ್. ದಸನಬ ಮಾದಪಟ್ಟ ಅಂಚೆ ಕುಶಾಲನಗರ ಸೋಮವಾರಪೇಟೆ ತಾ: ಕೊಡಗು ಜಿಲ್ಲೆ	43	ಗೊಂದಿ ಬಸವನಹಳ್ಳಿ	0-20 ಎಕರೆ	07-05-2001
2.	ಶ್ರೀ ಕೆ.ಹೆಚ್. ಉತ್ತಯ್ಯ ಹೆರೂರು ಅಂಚೆ ಮತ್ತು ಗ್ರಾಮ ಸೋಮವಾರಪೇಟೆ ತಾ: ಕೊಡಗು ಜಿಲ್ಲೆ	45	ದಡ್ಡಿ ಗ್ರಾಮ	0-10 ಎಕರೆ	21-05-2001
3.	ಶ್ರೀ ಸಿ.ಬಿ. ಗಣಪತಿ ಬಿನ್ ಬೂಪಣ್ಣ ಹೊಡೂರ್ ಗ್ರಾಮ ಮತ್ತು ಅಂಚೆ ಮಡಿಕೇರಿ ತಾಲ್ಲೂಕು ಕೊಡಗು ಜಿಲ್ಲೆ	45	ಹೊದೂರು ಗ್ರಾಮ	1-00 ಎಕರೆ	01-06-2001

ನಗರ ಪ್ರದೇಶದಲ್ಲಿ ಅಭಿವೃದ್ಧಿ ಶುಲ್ಕ ವಸೂಲಿ

2642 (3418) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಗರ ಪ್ರದೇಶದಲ್ಲಿ ಅಭಿವೃದ್ಧಿ ತೆರಿಗೆ ವಸೂಲಿ ಮಾಡುವ ಬಗೆಗೆ ನಗರ ಸಭೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ನಡುವೆ ಜಿಜ್ಞಾಸೆ ಇದ್ದು ನಗರ ಸಭೆ ಅಭಿವೃದ್ಧಿ ಶುಲ್ಕ ವಸೂಲಿ ಮಾಡಲು ಕಾನೂನು ತೊಡಕು ಇರುವುದನ್ನು ಪರಿಹರಿಸಲು ಈ ಹಿಂದೆ ಸರ್ಕಾರವು ಆಶ್ವಾಸನೆ ನೀಡಿತ್ತೆ?

ಅ) ಹಾಗಿದ್ದಲ್ಲಿ ಈ ಕಾನೂನು ತೊಡಕನ್ನು ನಿವಾರಿಸುವ ದಿಸೆಯಲ್ಲಿ ಈ ವರೆವಿಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :—

ಅ), ಆ) ಹೌದು, ಆದಾಗ್ಯೂ ಸರ್ಕಾರ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ 76(2)ಕ್ಕೆ ತಿದ್ದುಪಡಿ ತರಲು ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆ.

2642 (3418) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ನಗರ ಪ್ರದೇಶಗಳಲ್ಲಿನ ಬಹುತೇಕ ವಾಣಿಜ್ಯ ಸಂಕೀರ್ಣಗಳಲ್ಲಿ ವಾಹನಗಳ ನಿಲುಗಡೆಗಾಗಿ ಸ್ಥಳಾವಕಾಶ ಮಾಡದೇ ಇರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಸಾರ್ವಜನಿಕ ರಸ್ತೆಗಳೇ ವಾಹನ ನಿಲುಗಡೆ ಪ್ರದೇಶವಾಗಿರುವದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿರುವುದನ್ನು ಸರ್ಕಾರ ಮನಗಂಡಿದೆಯೇ;

ಇ) ಹಾಗಿದ್ದಲ್ಲಿ ವಾಣಿಜ್ಯ ಸಂಕೀರ್ಣಗಳಲ್ಲಿ ವಾಹನ ನಿಲುಗಡೆ ಅವಕಾಶವನ್ನು ಕಡ್ಡಾಯಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :—

ಅ) ನಗರ ಪ್ರದೇಶಗಳಲ್ಲಿನ ಬಹುತೇಕ ವಾಣಿಜ್ಯ ಸಂಕೀರ್ಣಗಳಲ್ಲಿ ವಾಹನಗಳ ನಿಲುಗಡೆಗಾಗಿ ಸ್ಥಳ ಅವಕಾಶ ಮಾಡಿಕೊಟ್ಟಿಲ್ಲದೇ ಇರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೌದು.

ಇ) ವಾಣಿಜ್ಯ ಸಂಕೀರ್ಣದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸುವುದರ ಸಂಬಂಧದಲ್ಲಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) ನಕ್ಷೆ ಮಂಜೂರಾತಿ ಸಮಯದಲ್ಲಿ ಕಟ್ಟಡದ ವಿಸ್ತೀರ್ಣಕ್ಕನುಗುಣವಾಗಿ ವಲಯ ನಿಯಮ ಹಾಗೂ ಬೈಲಾನುಸಾರ ಅಗತತ್ಯ ವಾಹನ ನಿಲುಗಡೆಯನ್ನು ನಿಗಧಿಪಡಿಸಲಾಗಿರುತ್ತದೆ.

ಆ) ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಸಮಯದಲ್ಲಿ ಕಟ್ಟಡದ ವಿಸ್ತೀರ್ಣಕ್ಕನುಗುಣವಾಗಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಿದಲ್ಲಿ ಮಾತ್ರ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ. ಹಾಗೂ ಈ ಸಂಬಂಧ ಮುಚ್ಚಳಿಕೆ ಪತ್ರವನ್ನು ಸಹ ಆರ್ಜಿದಾರರಿಂದ ಪಡೆಯಲಾಗುತ್ತಿದೆ.

ಇ) ಸ್ವಾಧೀನಾನುಭವ ಪ್ರಮಾಣ ಪತ್ರ ಪಡೆಯುವ ಸಮಯದಲ್ಲಿ ವಾಹನ ನಿಲುಗಡೆ ಮೀಸಲಿಟ್ಟ ಪ್ರದೇಶವನ್ನು ನಂತರದ ದಿನಗಳಲ್ಲಿ ಇತರೇ ಬಳಕೆಗೆ ಬಳಸುತ್ತಿರುವುದು ಗಮನಿಸಿದ ಕೂಡಲೇ ಕೆ.ಎಂ.ಸಿ. ಕಾಯ್ದೆಯನ್ವಯ ನೋಟೀಸ್ ಜಾರಿ ಮಾಡಿ ತಳಮಾಳಿಗೆಯಲ್ಲಿನ ಅನಧಿಕೃತ ನಿರ್ಮಾಣವನ್ನು ಒಡೆದುಹಾಕಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ) ಅನೇಕ ಪ್ರಕರಣಗಳಲ್ಲಿ ಅಧೀಲುಗಳ ಸ್ಥಾಯಿ ಸಮಿತಿ ಮತ್ತು ನ್ಯಾಯಾಲಯಗಳಿಂದ ತಡೆಯಾಜ್ಞೆಯನ್ನು ತಂದಿದ್ದು ಈ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಉ) ವಾಹನ ನಿಲುಗಡೆಗೆ ಮೀಸಲಿಟ್ಟ ಪ್ರದೇಶಗಳನ್ನು ಇತರೇ ಉಪಯೋಗಗಳಿಗೆ ಬಳಸುವುದನ್ನು ತಡೆಗಟ್ಟಲು ಕಠಿಣ ಕ್ರಮ ತೆಗೆದುಕೊಳ್ಳುವಂತೆ ಸ್ಥಳೀಯ ಅಭಿಯಂತರುಗಳಿಗೆ ಸೂಚಿಸಲಾಗಿದ್ದು, ಇದನ್ನು ಕಾರ್ಯಗತಗೊಳಿಸದ ಅಭಿಯಂತರುಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿನ ನಗರ ಪ್ರದೇಶದಲ್ಲಿ "ಹುಡ್ಕೊ"ನೆರವಿನ ಸಾಲ ಸೌಲಭ್ಯದ ಅನ್ವಯ ನಗರಸಭೆ ವ್ಯಾಪ್ತಿಯ ಅಭಿವೃದ್ಧಿ ಕಾರ್ಯಕ್ರಮಗಳು

2644 (೨೪೨೦) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ):— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿನ ನಗರಸಭೆಗಳಿಗೆ ಹುಡ್ಕೋ ಅನುದಾನಿತ ಸಹಾಯ ಧನವನ್ನಾಗಿ ತಲಾ ಒಂದು ಕೋಟಿ ರೂ.ಗಳನ್ನು ನೀಡಲಾಗಿದೆಯೇ;

ಆ) ಹಾಗೆ ನೀಡಲಾದ ಹಣದಲ್ಲಿ ನಗರ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದೆಯೇ; (ವಿವರ ನೀಡುವುದು)

ಇ) ಈ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ ಹಾಗೂ ಉಸ್ತುವಾರಿಯ ಜವಾಬ್ದಾರಿ ಯಾವ ಇಲಾಖೆಯ ವ್ಯಾಪ್ತಿಗೆ ಬರುತ್ತದೆ;

ಈ) ಈ ಕಾಮಗಾರಿಗಳಲ್ಲಿನ ಗುಣಮಟ್ಟ ಕಾಯ್ದುಕೊಳ್ಳದೇ ಇರುವ ಸಂಗತಿ ಸರ್ಕಾರಕ್ಕೆ ತಿಳಿದಿದೆಯೆ;

ಉ) ಈ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಸರ್ಕಾರದ ಕ್ರಮಗಳು ಏನು?